# ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ನಿಗಮ ನಿಯಮಿತ, ಮೈಸೂರು.

(ಕರ್ನಾಟಕ ಸರ್ಕಾರದ ಸ್ವಾಮ್ಯತೆಗೆ ಒಳಪಟ್ಟಿದೆ)


ನಿಗಮ ಕಛೇರಿ
ನಂ. 29
ವಿಜಯನಗರ 2ನೇ ಹಂತ, ಹಿನಕಲ್,
ಮೈಸೂರು-570017
CIN: U40109KA2004SGC035177
Website : www.cescmysore.org.

ಸಹಾಯಕ ಪ್ರಭಾರ ಅಧೀಕ್ಷಕಇಂಜಿನಿಯರ್ (ವಿ)
ರವರ ಕಛೇರಿ, ಕಾರ್ಯ ಮತ್ತು ಪಾಲನೆ, ವರುಣ
ಉಪ ವಿಭಾಗ, ಮೈಸೂರು - 570010
email ID: aeecescvaruna@gmail.com
ದೂರವಾಣಿ: 0821-2599633


ಸಂಖ್ಯೆ : ಸಕಾಇಂ/ಹಿಸ/ವರುಣ- 1497-98 ದಿನಾಂಕ : 18-1-19

## ಸಭೆಯ ನಡಾವಳಿಗಳು

ದಿನಾಂಕ 04.1.2019 ರಂದು ವರುಣ ಉಪವಿಭಾಗ ಕಛೇರಿಯಲ್ಲಿ ಪ್ರಭಾರ ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ, ಮೈಸೂರು ವೃತ್ತ ರವರ ಅಧ್ಯಕ್ಷತೆಯಲ್ಲಿ ನಡೆದ ಜನ ಸಂಪರ್ಕ ಸಭೆಯ ನಡಾವಳಿಗಳು.

### -: ಸಭೆಯಲ್ಲಿ ಹಾಜರಿದ್ದವರು :-

1) ಶ್ರೀ ಮುಜಾಮಿಲ್ ಖಾನ್ : ಪ್ರಭಾರ ಅಧೀಕ್ಷಕ ಇಂಜಿನಿಯರ್(ವಿ), ಹಾಗೂ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ&ಪಾ ವೃತ್ತ, ಮೈಸೂರು.
2) ಶ್ರೀ ನೀಲಶೆಟ್ಟಿ ಬಿ.ಎನ್. : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ&ಪಾ ಉಪವಿಭಾಗ, ವರುಣ.
3) ಕು॥ ವಿನುತ ಈ : ಸಹಾಯಕ ಇಂಜಿನಿಯರ್(ತಾ), ಕಾ&ಪಾ ಉಪವಿಭಾಗ, ವರುಣ.
4) ಶ್ರೀ ಶಿವಕುಮಾರ್ ಬಿ. : ಸಹಾಯಕ ಇಂಜಿನಿಯರ್(ವಿ), ಕಾ&ಪಾ ಘಟಕ, ವರುಣ ಶಾಖೆ.
5) ಶ್ರೀ ರವಿಕುಮಾರ್ ಬಿ.ಎನ್. : ಕಿರಿಯ ಇಂಜಿನಿಯರ್(ವಿ), ಕಾ&ಪಾ ಘಟಕ, ದೇವಲಾಪುರ ಶಾಖೆ.
6) ಶ್ರೀ ತಿಮ್ಮರಾಜು : ಕಿರಿಯ ಇಂಜಿನಿಯರ್(ವಿ), ಕಾ&ಪಾ ಘಟಕ, ಮೆಲ್ಲಹಳ್ಳಿ ಶಾಖೆ.
7) ಶ್ರೀ ವೆಂಕಟೇಶ್ : ಕಿರಿಯ ಇಂಜಿನಿಯರ್(ವಿ), ಕಾ&ಪಾ ಘಟಕ, ಮೇಗಳಾಪುರ ಶಾಖೆ.
8) ಶ್ರೀ ಮಧುಸೂದನ ಎಸ್.ಈ. : ಹಿರಿಯ ಸಹಾಯಕ, ಕಾ&ಪಾ ಉಪವಿಭಾಗ, ವರುಣ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸಭೆಗೆ ಹಾಜರಿದ್ದ ಪ್ರಭಾರ ಅಧೀಕ್ಷಕ ಇಂಜಿನಿಯರ್ (ವಿ) ಹಾಗೂ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ, ಮೈಸೂರು ವೃತ್ತ ರವರಾದ ಶ್ರೀ ಮುಜಾಮಿಲ್ ಖಾನ್ ರವರನ್ನು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳುವಂತೆ ವಿನಂತಿಸಿಕೊಳ್ಳುತ್ತ ಸಭೆಗೆ ಹಾಜರಿದ್ದ ಎಲ್ಲರನ್ನೂ ಸ್ವಾಗತಿಸಿದರು. ಸಭೆಯಲ್ಲಿ ಹಾಜರಿದ್ದ ಗ್ರಾಹಕರು ತಮ್ಮ ಕುಂದುಕೊರತೆಗಳನ್ನು ಅಧ್ಯಕ್ಷರ ಮುಂದೆ ಈ ಕೆಳಕಂಡಂತೆ ನಿವೇದಿಸಿಕೊಂಡರು.

| ಕ್ರ. ಸಂ. | ಸಲಹೆ/ದೂರುಗಳನ್ನು ನೀಡಿದ ಸದಸ್ಯರ ಹೆಸರು ಮತ್ತು ವಿಳಾಸ | ಸಲಹೆ/ದೂರುಗಳ ವಿವರ | ಸಲಹೆ/ದೂರುಗಳಿಗೆ ಉತ್ತರ |
|---|---|---|---|
| 1 | ಶ್ರೀ ನಾಗರಾಜು<br>ವರುಣ ಗ್ರಾಮ,<br>ದೂ: 9741314990 | 1) ವರುಣ ಗ್ರಾಮದ ಪರಿಶಿಷ್ಟ ಜಾತಿ ಬೀದಿಯ ಸಿದ್ದಪ್ಪಾಜಿ ದೇವಸ್ಥಾನ ಹತ್ತಿರ ನಿರ್ಮಾಣವಾಗುತ್ತಿರುವ ಸಮುದಾಯ ಭವನದ ಮೇಲೆ ಹಾದು ಹೋಗಿರುವ ವಿದ್ಯುತ್ ತಂತಿಯನ್ನು ಸ್ಥಳಾಂತರಿಸಲು ಮನವಿ ಮಾಡಿದರು. | ಪ್ರಭಾರ ಅಧೀಕ್ಷಕ ಇಂಜಿನಿಯರ್(ವಿ) ರವರು ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳಲು ಸಹಾಯಕ ಇಂಜಿನಿಯರ್ (ವಿ), ವರುಣ ಶಾಖೆ ರವರಿಗೆ ಸೂಚಿಸಿದರು. |
| 2 | ಶ್ರೀ ರವಿಕುಮಾರ್<br>ಸುಖದಾಯಿ ಲೇಔಟ್<br>ದೂ: 9538936598 | 2) ಸುಖದಾಯಿ ಲೇಔಟ್‌ನಲ್ಲಿ ಸದರಿಯವರು ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದಿದ್ದು, ಪ್ರಸ್ತುತ ಶಾಶ್ವತ ವಿದ್ಯುತ್ ಸಂಪರ್ಕ ನೀಡುತ್ತಿಲ್ಲವೆಂದು ದೂರಿದರು. | ಸಮಸ್ಯೆಯ ಬಗ್ಗೆ ಆಲಿಸಿ ಮತ್ತು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರು ವರುಣ ಉಪವಿಭಾಗ ರವರೊಂದಿಗೆ ಚರ್ಚಿಸಿ ಇದಕ್ಕುತ್ತರಿಸಿದ ಪ್ರಭಾರ ಅಧೀಕ್ಷಕ ಇಂಜಿನಿಯರ್(ವಿ) ರವರು "Abundant layout" ಬಗ್ಗೆ KERC ರವರಿಗೆ ಸಲಹೆ |

ಮು.ತಿ.ನೋ.

Scanned by CamScanner

Page- 2

| | | | |
|---|---|---|---|
| | | | ಕೋರಿ ಈಗಾಗಲೇ ಪತ್ರ ಬರೆಯಲಾಗಿದೆ. KERC ಯಿಂದ ಉತ್ತರ ದೊರೆತ ನಂತರ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು. |
| 3 | ಚೋರನಹಳ್ಳಿ ಶಿವಣ್ಣ<br>ಚೋರನಹಳ್ಳಿ<br>ದೂ: 9632866847 | 3) ಭಾಗ್ಯಜ್ಯೋತಿ ಯೋಜನೆಯಡಿ ವಿದ್ಯುತ್ ಸಂಪರ್ಕ ದೊರೆತ ಸಮಯದಲ್ಲಿ ಕೆಲವು ಸ್ಥಾವರದ ಆರ್.ಆರ್. ನಂಬರುಗಳು, ಗ್ರಾಹಕರ ಹೆಸರು ಅದಲು ಬದಲಾಗಿರುವುದೆಂದು ದೂರು ನೀಡಿದರು. | ಇದಕ್ಕೆ ಉತ್ತರಿಸಿದ ಪ್ರಭಾರ ಅಧೀಕ್ಷಕ ಇಂಜಿನಿಯರ್(ವಿ) ರವರು ಅದಲು ಬದಲಾಗಿರುವ ಪಟ್ಟಿಯನ್ನು ವರುಣ ಶಾಖಾಧಿಕಾರಿಯವರಿಗೆ ನೀಡಿ ಸರಿಪಡಿಸಿ ಕೊಳ್ಳಬೇಕಾಗಿ ತಿಳಿಸಿದರು. |
| | | 4) ಐಪಿ ಪರಿವರ್ತಕಗಳು ಆಗಾಗ್ಗೆ ದುರಸ್ಥಿ ಗೊಳ್ಳುತ್ತಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ ದೂರಿದರು. | ಇದಕ್ಕೆ ಉತ್ತರಿಸಿದ ಪ್ರಭಾರ ಅಧೀಕ್ಷಕ ಇಂಜಿನಿಯರ್(ವಿ) ರವರು ಅನಧಿಕೃತ ಐಪಿ ಸ್ಥಾವರಗಳ ಬಳಕೆಯಿಂದಾಗಿ ಪರಿವರ್ತಕ ಹೆಚ್ಚು ಭಾರ ತಡೆಯಲಾಗದೆ ದುರಸ್ಥಿಗೊಳ್ಳುವುದು ಇದಕ್ಕೆ ಒಂದು ಕಾರಣವಾಗಿದೆ. ಆದ್ದರಿಂದ ಆದಷ್ಟು ರೈತರ ಮನವೊಲಿಸಿ ಅನಧಿಕೃತ ಐಪಿಗಳನ್ನು ಅಧಿಕೃತ ಮಾಡಿಸಿಕೊಳ್ಳಬೇಕೆಂದು ತಿಳಿಸಿದರು. ಹಾಗೂ ಮುಂದುವರೆದು ಎಲ್ಲಾ ಶಾಖಾಧಿಕಾರಿಗಳಿಗೆ ಅನಧಿಕೃತ ಐಪಿ ಸ್ಥಾವರಗಳ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಬೇಕೆಂದು ಸೂಚಿಸಿದರು. |
| | | 5) ಚೋರನಹಳ್ಳಿ ರಸ್ತೆಯ ತನಿಷ್ಕಾ ಬಾರ್ ಅನಧಿಕೃತ ಕಟ್ಟಡವಾಗಿದ್ದು ಸದರಿ ಕಟ್ಟಡದ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸ ಬೇಕೆಂದು ದೂರಿದರು. | ಇದಕ್ಕೆ ಉತ್ತರಿಸಿದ ಪ್ರಭಾರ ಅಧೀಕ್ಷಕ ಇಂಜಿನಿಯರ್(ವಿ) ರವರು ನಮ್ಮ ಇಲಾಖೆಯವರು ದಾಖಲೆ ಪರಿಶೀಲಿಸದೆ ವಿದ್ಯುತ್ ಸಂಪರ್ಕ ನೀಡದಿರಲು ಸಾಧ್ಯವಿಲ್ಲ. ಆದಾಗ್ಯೂ ದಾಖಲೆಗಳ ಪರಿಶೀಲನೆ ಮಾಡಬೇಕಾಗಿದ್ದಲ್ಲಿ RTI ಅಲ್ಲಿ ಮಾಹಿತಿ ಕೋರಿ ಪರಿಶೀಲಿಸಬಹುದೆಂದು ತಿಳಿಸಿದರು. |
| 4 | ಶಿವಕುಮಾರ್<br>ಮರೀಗೌಡನಹುಂಡಿ<br>ದೂ: 9964432918 | 6) ಮರಿಗೌಡನಹುಂಡಿಯಲ್ಲಿ ವೋಲ್ಟೇಜ್ ಸಮಸ್ಯೆಯಿದ್ದು ಹೆಚ್ಚುವರಿ ಪರಿವರ್ತಕ ಅವಶ್ಯಕತೆ ಇದೆ ಎಂದು ಮನವಿ ಮಾಡಿದರು. | ಪ್ರಭಾರ ಅಧೀಕ್ಷಕ ಇಂಜಿನಿಯರ್(ವಿ) ರವರು ಸ್ಥಳ ಪರಿಶೀಲಿಸಿ ತುರ್ತಾಗಿ ಕ್ರಮ ಕೈಗೊಳ್ಳಲು ಕಿರಿಯ ಇಂಜಿನಿಯರ್ (ವಿ), ದೇವಲಾಪುರ ಶಾಖೆ ರವರಿಗೆ ಸೂಚಿಸಿದರು. |
| | | 7) ಮರಿಗೌಡನಹುಂಡಿಯಲ್ಲಿ ದುರಸ್ಥಿ ಕಂಬಗಳನ್ನು ಬದಲಾಯಿಸಬೇಕೆಂದು ದೂರಿದರು. | ಪ್ರಭಾರ ಅಧೀಕ್ಷಕ ಇಂಜಿನಿಯರ್(ವಿ) ರವರು ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳಲು ಕಿರಿಯ ಇಂಜಿನಿಯರ್ (ವಿ), ದೇವಲಾಪುರ ಶಾಖೆ ರವರಿಗೆ ಸೂಚಿಸಿದರು. |
| 5 | ಮಾದಪ್ಪ ಚೆನ್ನಪ್ಪ<br>ಮೊಸಂಬಾಯಹಳ್ಳಿ<br>ದೂ: 9739737762 | 8) ತಮ್ಮ ಜಮೀನಿನ ಬಳಿ ಇರುವ DOLO ಯನ್ನು ಸ್ಥಳಾಂತರಿಸಿ ಕೊಡಬೇಕಾಗಿ ದೂರು ನೀಡಿದರು. | ಪ್ರಭಾರ ಅಧೀಕ್ಷಕ ಇಂಜಿನಿಯರ್(ವಿ) ರವರು ಸ್ಥಳ ಪರಿಶೀಲಿರಿಸಿ ಇಲಾಖೆಯ ನಿಯಮಾನುಸಾರ ಕ್ರಮ ಕೈಗೊಳ್ಳಲು ಸಹಾಯಕ ಇಂಜಿನಿಯರ್ (ವಿ), ವರುಣ ಶಾಖೆ ರವರಿಗೆ ಸೂಚಿಸಿದರು. |

ಪು.ತಿ.ನೋ.

Scanned by CamScanner

Page-3

| | | | |
|---|---|---|---|
| 6 | ರವಿಕುಮಾರ್<br>ಪ್ರಜ್ಞಾ ಲೇಔಟ್<br>ದೂ: 9945286972 | 9) ಪ್ರಜ್ಞಾ ಲೇಔಟ್‌ನಲ್ಲಿ ಸದರಿಯವರು ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದಿದ್ದು, ಪ್ರಸ್ತುತ ಶಾಶ್ವತ ವಿದ್ಯುತ್ ಸಂಪರ್ಕ ನೀಡುತ್ತಿಲ್ಲ ವೆಂದು ದೂರಿದರು. | ಸಮಸ್ಯೆಯ ಬಗ್ಗೆ ಆಲಿಸಿ ಮತ್ತು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ವರುಣ ಉಪವಿಭಾಗ ರವರೊಂದಿಗೆ ಚರ್ಚಿಸಿ ಇದಕ್ಕುತ್ತರಿಸಿದ ಪ್ರಭಾರ ಅಧೀಕ್ಷಕ ಇಂಜಿನಿಯರ್(ವಿ) ರವರು ಬಡಾವಣೆಯ ಮಾಲೀಕರು ಹಾಗೂ ಬಡಾವಣೆಯ ಬಿಲ್ಡರ್‌ರವರ ನಡುವೆ ಕೋರ್ಟ್ ಕಲಹ ನಡೆಯುತ್ತಿರುವುದರಿಂದ ಮತ್ತು ಬಡಾವಣೆಯ ಕಾಮಗಾರಿಯು ಪೂರ್ಣಗೊಂಡಿರುವುದಿಲ್ಲ ವಾದ್ದರಿಂದ ಶಾಶ್ವತ ವಿದ್ಯುತ್ ಸಂಪರ್ಕ ಪ್ರಸ್ತುತ ನೀಡಲು ಸಾಧ್ಯವಿರುವುದಿಲ್ಲ ಎಂದು ತಿಳಿಸಿದರು |
| 7 | ರಾಹುಲ್ ಎಲೆಕ್ಟ್ರಿಕಲ್ C/o ಮಂಜುನಾಥ್<br>ದೂ: 9901671520/ 8217474979 | 10) ವಸಂತನಗರ ಬಡಾವಣೆಯ ವಿದ್ಯುತ್ತೀಕರಣ ಆಗದೆ ಸುಮಾರು ಮನೆಗಳು ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದಿರುತ್ತಾರೆ. ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದಿರುವ ಗ್ರಾಹಕರು ಪ್ರತಿ ಯೂನಿಟ್‌ಗೆ 10/- ರೂ.ಗಳಂತೆ ವಿದ್ಯುತ್ ಬಿಲ್ ಕಟ್ಟುತ್ತಿರುವುದು ಹೊರೆಯಾಗಿರು ವುದರಿಂದ ಆದಷ್ಟು ಬೇಗ ಬಡಾವಣೆಯ ವಿದ್ಯುತ್ತೀಕರಣಗೊಳಿಸಿ ತಮಗೆ ಶಾಶ್ವತ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡಬೇಕಾಗಿ ಪ್ರಭಾರ ಅಧೀಕ್ಷಕಇಂಜಿನಿಯರ್ ರವರಲ್ಲಿ ಮನವಿಯನ್ನು ಸಲ್ಲಿಸಿದರು. | ಸಮಸ್ಯೆಯ ಬಗ್ಗೆ ಆಲಿಸಿ ಇದಕ್ಕುತ್ತರಿಸಿದ ಪ್ರಭಾರ ಅಧೀಕ್ಷಕ ಇಂಜಿನಿಯರ್ ರವರು ಸದರಿ ಬಡಾವಣೆಯ ವಿದ್ಯುತ್ತೀಕರಣವನ್ನು **"ಸ್ವಯಂ ನಿರ್ವಹಣ ಯೋಜನೆ"** ಯಲ್ಲಿ ತುರ್ತಾಗಿ ಮಾಡಿಸಬೇಕೆಂದು MUDA ರವರಿಗೆ ಪತ್ರ ಬರೆಯಲು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವರುಣ ಉಪವಿಭಾಗ ರವರಿಗೆ ಸೂಚಿಸಿದರು. |

18/1

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
ಕಾರ್ಯ ಮತ್ತು ಪಾಲನೆ,
ವರುಣ ಉಪವಿಭಾಗ, ಮೈಸೂರು.

ಪ್ರತಿಗಳು :

1) ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ, ಕುವೆಂಪುನಗರ, ಮೈಸೂರು ರವರ ಕೃಪ ಅವಗಾಹನೆಗಾಗಿ.
2) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾ.ವಿ.ಸ.ನಿ.ನಿ. ಕಾರ್ಯ ಮತ್ತು ಪಾಲನೆ ವಿಭಾಗ, ಎನ್.ಆರ್. ಮೊಹಲ್ಲಾ, ಮೈಸೂರು ರವರ ಕೃಪ ಅವಗಾಹನೆಗಾಗಿ.
3) ಕ ಪ್ರ./ಮು ಕ. ✓

Scanned by CamScanner